# ವಿಶ್ವನಂದಿನಿ ಲೇಖನಮಾಲೆ – 42

## ಗಂಡ ಹೆಂಡಿರ ಜಗಳದ ಕುರಿತು....

ಈ ಜಗತ್ತಿನಲ್ಲಿ ಮನುಷ್ಯನಷ್ಟು ಬುದ್ಧಿವಂತ ಪ್ರಾಣಿ ಮತ್ತೊಂದಿಲ್ಲ. ಮನುಷ್ಯನಷ್ಟು ಮೂರ್ಖ ಪ್ರಾಣಿಯೂ ಮತ್ತೊಂದಿಲ್ಲ.

ಕಾರಣ, ಇಡಿಯ ಜೀವಸಂಕುಲದಲ್ಲಿ ಮನುಷ್ಯನಿಗೆ ಮಾತ್ರ ಬುದ್ಧಿ ಎನ್ನುವ ವಸ್ತುವನ್ನು ಪರಮಾತ್ಮ ನೀಡಿದ್ದಾನೆ. ಅಷ್ಟು ಅದ್ಭುತವಾದ ಬುದ್ಧಿ ಎನ್ನುವ ವಸ್ತುವಿನಿಂದ ಏನೆಲ್ಲ ಸಾಧಿಸಬಹುದು, ಆದರೆ ಅದೇ ಬುದ್ಧಿಯನ್ನು ಸರಿಯಾಗಿ ಉಪಯೋಗಿಸದೇ ಮನುಷ್ಯ ಶತಮೂರ್ಖನಾಗಿಬಿಡುತ್ತಾನೆ. **ಇಡಿಯ ಮನುಕುಲಕ್ಕೆ ಒಳಿತನ್ನು ಮಾಡುವಷ್ಟು ಸಾಮರ್ಥ್ಯ ಮನುಷ್ಯನ ಬುದ್ಧಿಗಿದೆ. ಆದರೆ ಈ ಬುದ್ಧಿಗೇಡಿ ತನ್ನ ಜೀವನವನ್ನೇ ಹಾಳುಮಾಡಿಕೊಂಡು ಕುಳಿತಿರುತ್ತಾನೆ.**

ಇಂದು ಗಂಡ ಹೆಂಡಿರ ಜಗಳದ ಕುರಿತು, ಅದರ ಪೀಠಿಕೆ, ಪರಿಣಾಮಗಳ ಕುರಿತು, ಅದಕ್ಕೆ ಕಾರಣವಾದ ಸಿಟ್ಟಿನ ಕುರಿತು ತಿಳಿಯೋಣ. ತಿಳಿದ ನಂತರ ನಾವೆಷ್ಟು ದಡ್ಡರು ಎನ್ನುವದು ಅನಾವರಣಗೊಳ್ಳುತ್ತದೆ.

ಮೊದಲಿಗೆ ಗಂಡ ಹೆಂಡಿರಲ್ಲಿ ಜಗಳವಿರಲೇಬಾರದು, ಭಿನ್ನಾಭಿಪ್ರಾಯವಿರಲೇ ಬಾರದು ಎನ್ನುವದು ಪರಮದಡ್ಡತನ. ಗಂಡ ಹೆಂಡಿರು, ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಕೌಟುಂಬಿಕವಾಗಿ ಕೆಲವು ಸಂದರ್ಭಗಳಲ್ಲಿ ಸಾಮಾಜಿಕವಾಗಿ ಸಹಿತ ವಿಭಿನ್ನರು.

ಇವನು ಗಂಡು ಅವಳು ಹೆಣ್ಣು. ಇವನು ಗಂಟೆಗಟ್ಟಲೇ ತಿರುಗಾಡಿ ಬೆವರಿಳಿಸಿ ದುಡಿಯಬಲ್ಲ. ಅದನ್ನು ಹೆಣ್ಣು ಮಾಡ ಹೊರಟರೆ ಅವಳ ಸುನೀತತೆಯೇ ಕಾಣೆಯಾಗಿಬಿಡುತ್ತದೆ.

ಅವನು ನೂರು ಜನಕ್ಕೆ ಅಡಿಗೆ ಮಾಡಿ ಬೆಟ್ಟದಂತಹ ಪಾತ್ರೆಯನ್ನು ಕೆಳಗಿಳಿಸಿ 'ಹೆಂಗೆ' ಅನ್ನಬಲ್ಲ, ಆದರೆ

ಅವನಿಗೆ ಅವನೊಬ್ಬನಿಗೆ ಅನ್ನ ಸಾರು ಮಾಡಿಕೊಳ್ಳಲು ಆಗುವದಿಲ್ಲ, ದೊಡ್ಡ ಅಡಿಗೆ ಭಟ್ಟ ತನಗೊಬ್ಬನಿಗೆ ಎಂದಿಗೂ ಅಡಿಗೆ ಮಾಡಿಕೊಳ್ಳುವದೇ ಇಲ್ಲ, ಯಾಕೆಂದರೆ ಅವನಿಗದು ಸಾಧ್ಯವಿಲ್ಲ. ಅದೇ ಹೆಣ್ಣು ನಾಲ್ಕು ಮಕ್ಕಳನ್ನು ಒಟ್ಟಿಗೇ ನಿಭಾಯಿಸಿ ಹತ್ತು ಜನಕ್ಕೆ ಅಡಿಗೆ ಮಾಡಿ ಬಡಿಸಿ, ಮನೆಯನ್ನು ಒಪ್ಪವಾಗಿಡಬಲ್ಲಳು, ಗಂಡಸಿಗೆ ಅದು ಸಾಧ್ಯವೇ ಇಲ್ಲ.

ಅವನು ಮುಂದಿನ ನೂರು ವರ್ಷಗಳ ದೂರಾಲೋಚನೆಯನ್ನು ಸಮರ್ಥವಾಗಿ ಮಾಡಬಲ್ಲ, ಅವಳು ಒಂದು ವಿಷಯದ ಸೂಕ್ಷ್ಮಾತಿಸೂಕ್ಷ್ಮ ಪದರವನ್ನು ಸ್ಪಷ್ಟವಾಗಿ ತಿಳಿಯಬಲ್ಲಳು.

ಅವನು ಇನ್ನೊಬ್ಬರ ಆಲೋಚನೆಯ ಧಾಟಿಯನ್ನು, ಅವರ ಕೆಲಸದ ಉದ್ದೇಶವನ್ನು ಅರಿಯಬಲ್ಲ. ಇವಳು ಆ ಆಲೋಚನೆಯ ಹಿಂದಿನ ಭಾವನೆಯನ್ನು, ಅವರ ಮಾತಿನಲ್ಲಿ ಅಡಗಿರುವ ಮರ್ಮವನ್ನು ಸರಿಯಾಗಿ ತಿಳಿಯಬಲ್ಲಳು. ಹೀಗೆ ಇಬ್ಬರದೂ ಭಿನ್ನ ಮನಃಸ್ಥಿತಿ.

ಇದರ ಜೊತೆಯಲ್ಲಿ ಅವಳು ಬೆಳೆದ ಪರಿಸರ ಬೇರೆ, ಇವನು ಬೆಳೆದ ಪರಿಸರ ಬೇರೆ. ಹೀಗೆ ವಿಭಿನ್ನವಾದ ಮನಃಸ್ಥಿತಿ ಹೊಂದಿರುವ ಇವರಿಬ್ಬರು ಯಾವಾಗಲೂ ಭಿನ್ನಾಭಿಪ್ರಾಯವನ್ನು ಹೊಂದಲೇ ಬಾರದು, ಯಾವಾಗಲೂ ಒಂದೇ ರೀತಿ ಆಲೋಚನೆ ಮಾಡಬೇಕು ಎನ್ನುವದು ದಡ್ಡತನ.

**ನಾವು ಹಾಲಿಗೆ ಜೇನು ಹಾಕುತ್ತೇವೆ, ಸಕ್ಕರೆ ಹಾಕುತ್ತೇವೆ. ಹಾಕಿದ ಮೇಲೆ ಅದನ್ನು ಕಲಸಬೇಕು. ಇಲ್ಲದಿದ್ದರೆ ಅವು ಒಂದಾಗುವದಿಲ್ಲ. ಕಲಸುವದು ಎಂದರೆ ಹಾಲಿನಲ್ಲಿ ಕ್ಷೋಭ ಉಂಟು ಮಾಡುವದು ತಾನೇ? ಸ್ಥಿರವಾಗಿ ಇರುವ ಹಾಲನ್ನು ಚಮಚದಿಂದ ಗರಗರನೇ ತಿರುಗಿಸುತ್ತೇವೆ. ತಿರುಗಿಸಿದಾಗ ಮಾತ್ರ ಹಾಲು ಸಕ್ಕರೆ, ಅಥವಾ ಹಾಲು ಜೇನು ಒಂದಾಗಲು ಸಾಧ್ಯ. ಈ ತಿರುಗಿಸುವ ಪ್ರಕ್ರಿಯೆಯೇ ಗಂಡ ಹೆಂಡಿರ ಮಧ್ಯದಲ್ಲಿ ನಡೆಯಬೇಕಾದ ಜಗಳಗಳು, ಘರ್ಷಣೆಗಳು.**

ತಮ್ಮ ಜಗಳದಿಂದ ಒಬ್ಬರು ಮತ್ತೊಬ್ಬರ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ, ಒಬ್ಬರೊನ್ನಬ್ಬರು ತಿದ್ದಿಕೊಳ್ಳುತ್ತಿದ್ದಾರೆ, ಒಬ್ಬರಿಗೊಬ್ಬರು ಮತ್ತಷ್ಟು ಹತ್ತಿರವಾಗುತ್ತಿದ್ದಾರೆ ಹಾಲು ಜೇನು ಕೂಡುತ್ತಿದೆ ಎಂದಾದರೆ ಅದು ಸಾರ್ಥಕ. ಆ ಜಗಳಗಳು ಅವಶ್ಯವಾಗಿ ಬೇಕೇ ಬೇಕು.

ಮತ್ತೂ, ಗಂಡ ಹೆಂಡಿರ ಆ ರೀತಿಯ ಜಗಳದಲ್ಲಿ ಒಂದು ಮಾಧುರ್ಯವಿದೆ. ಆ ಮಾಧುರ್ಯ, ಆ ಜಗಳ ಮುಗಿದ ನಂತರ ಆರಂಭವಾಗುತ್ತದೆ. ಜಗಳ ಎಂದ ಮೇಲೆ ಇಬ್ಬರದೊಬ್ಬರದು ತಪ್ಪಿರುತ್ತದೆ. ಆ ತಪ್ಪನ್ನು ಒಪ್ಪುವ ಸದ್ಗುಣ ನಮ್ಮಲ್ಲಿರಬೇಕು. ಒಪ್ಪಿದ ನಂತರ ತಿದ್ದಿದವರನ್ನು ಓಲೈಸುವ ಘಳಿಗೆಯಿದೆಯಲ್ಲ, ಅದರಲ್ಲೂ ಗಂಡ ಹೆಂಡತಿಯನ್ನು ರಮಿಸಿ 'ಸಾರಿ' ಕೇಳುವ ಘಳಿಗೆ ಅದು ಮಾಧುರ್ಯದ ಘಳಿಗೆ, ಅದು ಅವರಿಬ್ಬರ ಮಧ್ಯದ ಪ್ರೀತಿಯನ್ನು, ಬಾಂಧವ್ಯವನ್ನು ಘನಿಷ್ಠಗೊಳಿಸುತ್ತದೆ.

ಇವರ ಬಗ್ಗೆ ಏನೂ ಮಾತನಾಡುವದು ಬೇಕಾಗಿಲ್ಲ. ಇಂಥ ಸುಂದರ ಜಗಳಗಳಿಂದ ಬದುಕನ್ನು ಹಸನುಗೊಳಿಸುವ ಅವರ ಜೀವನಕ್ಕೆ ದೃಷ್ಟಿ ಬೀಳದಿರಲಿ, ಹೀಗೆ ಪ್ರೀತಿಯಿಂದ ಕಚ್ಚಾಡುತ್ತ ಇನ್ನಷ್ಟು ಗಾಢವಾಗಿ ಪ್ರೀತಿಯನ್ನು ಬೆಳೆಸಿಕೊಳ್ಳಲಿ ಎಂಬ ಹರಕೆ ಮಾತ್ರ ಯಾವಾಗಲೂ ಇರುತ್ತದೆ.

ಇನ್ನು ಎರಡನೆಯ ಗುಂಪಿನ ಗಂಡ ಹೆಂಡಿರಿದ್ದಾರೆ. ಕುಂತರೆ ನಿಂತರೆ ಗಂಡ ಬೈಯುತ್ತಾನೆ. ಮಾತಾಡಿದರೂ ತಪ್ಪು, ಮಾತನಾಡದಿದ್ದರೂ ತಪ್ಪು. ಅಡಿಗೆ ಚನ್ನಾಗಿದ್ದರೆ ಉಣ್ಣುವದಿಲ್ಲ. ಚನ್ನಾಗಿಲ್ಲದಿದ್ದರೆ ಬೈಗುಳದ ಮಳೆ.

ಹಾಗೇ ಗಂಡನ ಯಾವ ಕಾರ್ಯವೂ ಇವಳಿಗೆ ಅಸಡ್ಡೆ. ಅವನಿಗೆ ಏಳು ಗಂಟೆಗೆ ಹೋಗಬೇಕಾಗಿರುತ್ತದೆ, ಇವಳು ಇನ್ನೂ ಎದ್ದೇ ಇರುವದಿಲ್ಲ. ಅವನು ಯಾವುದೋ ಅದ್ಭುತ ಆಲೋಚನೆಯನ್ನೋ, ವಿಷಯವನ್ನೋ ಹೇಳ-ಬರುತ್ತಾನೆ. ಇವಳಿಗೆ ಕೇಳುವ ಕಿವಿಯಿರುವದಿಲ್ಲ. ಅವನು ಭಾರೀ ಸಂಗೀತಗಾರ. ಇವಳಿಗೆ ಅದು ಅರಣ್ಯರೋದನ. ಅವನು ಎಲ್ಲಿ ಹೋದರೂ

ಇವಳಿಗೆ ಅನುಮಾನ. ಅವನ ಮೊಬೈಲನ್ನು ಇವಳು ಮುಟ್ಟುವ ಹಾಗಿಲ್ಲ, ಇವಳ ಫೋನನ್ನು ಅವನು ಸ್ಪರ್ಶಿಸಬಾರದು. ಮಕ್ಕಳ ವಿಷಯದಲ್ಲಿಯೂ ಇಬ್ಬರಿಗೆ ತಕರಾರು. ತಾನು ಹೇಳಿದ್ದು ನಡೆಯಬೇಕು ಅಂತ ಇವನು. ಅದು ನಡೆಯದಂತೆ ಪ್ಲಾನ್ ಮಾಡುವ ಚಾಣಾಕ್ಷ ಹೆಂಡತಿ.

ಇಂಥಾ ಸಂದರ್ಭಗಳಲ್ಲಿ ಸ್ಪಷ್ಟವಾಗಿ ತೋರುವ ವಿಷಯ ಎಂದರೆ ಒಬ್ಬರಲ್ಲೊಬ್ಬರಿಗೆ ಪ್ರೀತಿ ಇರುವದಿಲ್ಲ. ವಿಶ್ವಾಸ ಇರುವದಿಲ್ಲ. ಅಭಿಮಾನ ಇರುವದಿಲ್ಲ. ಇವರು ಸಮಾಜಕ್ಕೆ ಹೆದರಿ, ಮಕ್ಕಳಿಗೆ ಹೆದರಿ ಅಥವಾ ಬಿಟ್ಟು ಹೋದರೆ ಜೀವನ ಹೇಗೆ ಎಂಬ ಭಯಕ್ಕೆ ಒಳಗಾಗಿ ಜೊತೆಯಲ್ಲಿರುತ್ತಾರೆ. ಗಂಡಹೆಂಡಿರಾಗಿ ನಟಿಸುತ್ತಿರುತ್ತಾರೆ. ಅವರ ಜೀವನದಲ್ಲಿ ಘರ್ಷಣೆ ಬಿಟ್ಟು ಬೇರೇನೂ ಇರುವದಿಲ್ಲ.

ಇವರ ಜೀವನ ಹಾಲು ಜೇನು ಸೇರಿದಂತಲ್ಲ. ಒಲೆಯ ಮೇಲಿಟ್ಟ ನೀರಿನ ಪಾತ್ರೆಯಂತಹದು. ಒಲೆ ನೀರನ್ನು ಕುದಿಸುತ್ತದೆ. ನೀರು ಕೊತಕೊತ ಕುದಿಯುತ್ತದೆ. ಒಲೆಗೆ ನೀರು ಕುದಿಯುವದು

ಬೇಕು. ನೀರಿಗೆ ಒಲೆ ಕುದಿಸುವದು ಬೇಕು. ಗಂಡನನ್ನು ಬೈಯದಿದ್ದರೆ ಇವಳಿಗೆ ಸಮಾಧಾನವಿಲ್ಲ. ಹೆಂಡತಿಯನ್ನು ಒದೆಯದಿದ್ದರೆ ಅವನಿಗೆ ಸಮಾಧಾನವಿಲ್ಲ. ಇವರ ಮಧ್ಯದಲ್ಲಿ ಪ್ರೀತಿಯೇ ಇರುವದಿಲ್ಲವಾದ್ದರಿಂದ ಈ ಕುರಿತು ಮಾತನಾಡುವ ಆವಶ್ಯಕತೆಯಿಲ್ಲ. ಬೆಸುಗೆಯೇ ಸಾಧ್ಯವಿಲ್ಲವೆಂದ ಬಳಿಕ ಬೆಸೆಯಲು ಹೋಗುವದು ದಡ್ಡತನ.

ಆದರೆ, ಮತ್ತೊಂದು ಗುಂಪಿದೆ. ಅವಳಿಗೆ ಅವನ ಮೇಲೆ ನಿಜವಾಗಿಯೂ ಪ್ರೀತಿ. ಅವನಿಗೆ ಇವಳನ್ನು ಬಿಟ್ಟಿರಲು ಸಾಧ್ಯವಿಲ್ಲ. ಆದರೆ ಅವನ ಯಾವುದೋ ಒಂದು ಕೆಲಸ, ಅಲೋಚನೆ, ವರ್ತನೆ ಇವಳಿಗಿಷ್ಟವಿಲ್ಲ. ಅವಳ ಯಾವುದೋ ಒಂದು ಕೆಲಸ, ಆಲೋಚನೆ, ವರ್ತನೆ ಇವನಿಗಿಷ್ಟವಿಲ್ಲ. ನಾಕು ದಿವಸ ಹಾಲು ಜೇನಿನಂತೆ ಒಂದಾಗಿರುತ್ತಾರೆ. ಮುಂದಿನ ಕ್ಷಣಕ್ಕೆ ಮುಖ ಕೆಡಿಸಿಕೊಳ್ಳುವಷ್ಟು ಜಗಳವಾಡುತ್ತಾರೆ. ಇಬ್ಬರಿಗೂ ಜಗಳವಾಡುವದು ಸುತರಾಂ ಇಷ್ಟವಿಲ್ಲ. ಒಬ್ಬರೊಬ್ಬರ ಮನ ನೋಯಿಸುವದು ಇಷ್ಟವಿಲ್ಲ.

ಆದರೂ ನೋಯಿಸಿಕೊಳ್ಳುತ್ತಾರೆ. ತಪ್ಪೆಂದು ಗೊತ್ತಿದ್ದರೂ ತಪ್ಪು ಮಾಡುತ್ತಾರೆ.

ಇವರ ಕುರಿತು ಮಾತನಾಡಬೇಕು ನಾವು.

ನೋಡಿ, ಜಗಳಕ್ಕೆ ಮೂಲ ಕಾರಣ ಸಿಟ್ಟು. ಸಿಟ್ಟಿಗೆ ಮೂಲಕಾರಣ ಅಸಹನೆ. ಈ ಅಸಹನೆ ಎನ್ನುವದೂ ಸಹ ಮೂರು ರೀತಿ ಇರುತ್ತದೆ.

**ಮೊದಲನೆಯದು ನಮ್ಮವರು ತಪ್ಪು ಮಾಡುತ್ತಿದ್ದಾಗ ಅದನ್ನು ತಿದ್ದಬೇಕು ಎನ್ನುವ ಅಪೇಕ್ಷೆಯಿಂದ ಉಂಟಾಗುವ ಅಸಹನೆ.**

**ಎರಡನೆಯದು, ಮತ್ತೊಬ್ಬರು ಏನೇ ಮಾಡಿದರೂ ಒಪ್ಪಿಕೊಳ್ಳದ ಮನಃಸ್ಥಿತಿಯಿಂದ ಉಂಟಾಗುವ ಅಸಹನೆ.**

**ಮೂರನೆಯದು ಮಾತು ಕೇಳದೆ ಇವರು ಹಾಳಾಗಿ ಹೋಗುತ್ತಿದ್ದಾರಲ್ಲಾ ಎನ್ನುವ ಅಸಹನೆ.**

ಮೊದಲ ರೀತಿಯ ಅಸಹನೆಯನ್ನು ತೋರಿಸಿ ನಮ್ಮ ಮೇಲೆ ಸಿಟ್ಟಿಗೆ ಬರುವ ಜನ ನಮ್ಮ ಹತ್ತಿರ

ಇರಬೇಕು. ಸಣ್ಣಪುಟ್ಟ ತಪ್ಪು ಮಾಡಿದಾಗ ಗದರಿಸುವ ಅಮ್ಮ, ಭಯಂಕರ ತಪ್ಪು ಮಾಡಿದಾಗ ಬೀಸಿ ಕಪಾಳಕ್ಕೆ ಹೊಡೆದ ಅಪ್ಪ,  ತುಂಟತನದ ತಪ್ಪು ಮಾಡಿದಾಗ ಹಿಂದೆ ಮುಂದೆ ನೋಡದೆ ಬೈಯುವ ಗೆಳೆಯ/ಗೆಳತಿ, ಸರಿಯಾಗಿ ಕಲಿಯದೇ ಇದ್ದಾಗ ಬುದ್ಧಿ ಹೇಳುವ ಮಾಸ್ತರು, ದಡ್ಡತನದ ತಪ್ಪು ತೋರಿದಾಗ ತಿದ್ದಿ ಬುದ್ಧಿ ಹೇಳುವ ಹೆಂಡತಿ/ಗಂಡ ಇವರೆಲ್ಲರೂ ಬೇಕು. ನಮ್ಮ ವ್ಯಕ್ತಿತ್ವವಿಕಸನಕ್ಕೆ ಸಹಾಯವಾಗುವ ಆಪ್ತರು ಇವರೆಲ್ಲ.

ಎರಡನೆಯವರಿಂದ ದೂರ ಇರುವದು ಬಿಟ್ಟು ಬೇರೆ ದಾರಿಯಿಲ್ಲ. ಮಾಡಿದ ಎಲ್ಲದರಲ್ಲೂ ತಪ್ಪು ಹುಡುಕುವವರು ನಮ್ಮ ಆಪ್ತರಲ್ಲ. ನಮ್ಮ ಗುಣವನ್ನೂ ಒಪ್ಪದವರನ್ನು ನಾವು ಹತ್ತಿರ ಇಟ್ಟು ಕೊಳ್ಳಬಾರದು.

ಆದರೆ, ಈ ಮೂರನೆಯ ಗುಂಪಿನ ಜನರನ್ನು ಪಡೆಯುವದು ಮಹತ್ತರ ಪುಣ್ಯ. ಅವರಿಗೆ ನಮ್ಮ ಮೇಲೆ ಅಸಾಧ್ಯ ಪ್ರೀತಿ. ನಮಗೆ ನಮ್ಮ ತಪ್ಪಿನ ಅರಿವಾಗುತ್ತಿಲ್ಲ. ನಾವು ನಮ್ಮ ಕೆಟ್ಟ ಚಾಳಿಯನ್ನು ಬಿಡಲು ತಯಾರಿಲ್ಲ. ಆದರೂ ಅವರು ಮೇಲಿಂದ

ಮೇಲೆ ಅಸಹನೆ ತೋರಿಸಿ, ಸಿಟ್ಟಿಗೆ ಬಂದು ನಮ್ಮನ್ನು ತಿದ್ದಲು ಪ್ರಯತ್ನಿಸುತ್ತಲೇ ಇರುತ್ತಾರೆ.

ಗಂಡ ಹೆಂಡಿರ ಮಧ್ಯದಲ್ಲಿ ಈ ರೀತಿಯ ಅಸಹನೆಯ ಸಿಟ್ಟು ಮೊಳಕೆಯೊಡೆದಾಗ ತುಂಬ ಜೋಪಾನ ವಹಿಸಬೇಕು. ಕಾರಣ, ಪ್ರೀತಿಯಿಂದ ಇದ್ದವರೇ ದೂರಾಗಿ ಯಾತನೆ ಅನುಭವಿಸುತ್ತಾರೆ. ಹೀಗಾಗಿ ಅಂತಹ ಜನರಿಗಾಗಿ ಈ ಲೇಖನ. ಪ್ರೀತಿಯ ಬೆಸುಗೆಯಿಂದ ಒಂದಾಗಿ ಬಾಳಬಲ್ಲ ಜೀವಗಳು, ದಡ್ಡತನದಿಂದ ದೂರಾಗುತ್ತಿದ್ದಾಗ ಅವರನ್ನು ಮತ್ತೆ ಬೆಸೆಯುವದಕ್ಕಾಗಿ ಈ ಪ್ರಯತ್ನ.

ಅಸಹನೆ ತೋರಿ, ಸಿಟ್ಟಿಗೆ ಬರುತ್ತಿವವರ ಕುರಿತು ಮೊದಲು ಬರೆಯುತ್ತೇನೆ. ಆಮೇಲೆ ನಿಮ್ಮ ಸಿಟ್ಟಿಗೆ ಒಳಗಾದವರ ಬಗ್ಗೆ.

ಮೊದಲಿಗೆ, ನಿಮ್ಮ ಅಸಹನೆಗೆ, ಸಿಟ್ಟಿಗೆ ಸರಿಯಾದ ಕಾರಣವಿದೆಯಾ ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿ. ನಾನೇ ತಿಳಿದವಳು/ನು ಎನ್ನುವ ಧೋರಣೆ ಬೇಡ.

ನಮ್ಮ ಜೀವನದಲ್ಲಿ ಒಂದು ಮಹತ್ತ್ವದ ಗುಣವನ್ನು ರೂಢಿಸಿಕೊಳ್ಳಬೇಕು. ಅದು ಪ್ರಾಮಾಣಿಕತೆ. ನೀವು

ಸಿಟ್ಟಿಗೆ ಬಂದರೂ ಅದರಲ್ಲಿ ಪ್ರಾಮಾಣಿಕತೆ ಇರಬೇಕು. ನಿಮ್ಮ ಸಿಟ್ಟಿನ ಮಾತಿನಲ್ಲಿಯೂ ಪ್ರಾಮಾಣಿಕತೆ ಇರಬೇಕು. ನಿಮ್ಮ ಸಿಟ್ಟಿಗೆ ಸರಿಯಾದ ಕಾರಣವಿದ್ದರೆ, ಎದುರಿನವರು ಅದನ್ನು ಗೌರವಿಸುತ್ತಾರೆ. ತಕ್ಷಣದಲ್ಲಿ ಗೌರವಿಸದೇ ಇರಬಹುದು, ಅದರೆ ನಿಮ್ಮ ಸಿಟ್ಟಿನಿಂದ ಅವರು ಉಪಕೃತರಾದ ಬಳಿಕ ಮನಃಪೂರ್ವಕವಾಗಿ ಗೌರವಿಸುತ್ತಾರೆ.

ಸಿಟ್ಟು ಎನ್ನುವದು ಬೆಂಕಿಯಂತಹ ವಸ್ತು. ಅದನ್ನು ಸರಿಯಾದ ರೀತಿಯಲ್ಲಿ, ಸರಿಯಾದ ಸಮಯದಲ್ಲಿ ಉಪಯೋಗಿಸಬೇಕು. ಉಪಯೋಗಿಸಬೇಕಾದ ಸ್ಥಳದಲ್ಲಿ ಸಿಟ್ಟನ್ನು ಉಪಯೋಗಿಸದೇ ಇರುವದೂ ಸಹ ದಡ್ಡತನ.

ಸಿಟ್ಟಿನ ಕುರಿತು ವಿಶಾಖದತ್ತ ಒಂದು ಅದ್ಭುತವಾದ ಮಾತನ್ನು ಹೇಳಿದ್ದಾನೆ. ನಮ್ಮ ಸಿಟ್ಟನ್ನು ಕಂಡು ನಮ್ಮವರಿಗೆ ಸಾತ್ವಿಕವಾದ ಭಯವಿದ್ದರೆ, ನಮ್ಮನ್ನು ಸಿಟ್ಟಿಗೆ ಬರಿಸಲಿಕ್ಕೆ ಅವರು ಅಂಜಿದರೆ, ಆಗ ಮಾತ್ರ ನಮ್ಮ ಸಿಟ್ಟಿಗೆ ಬೆಲೆ. ನಾವು ಸಿಟ್ಟಿಗೆ ಬಂದಾಗ ಎದುರಿನವರೂ ಸಿಟ್ಟಿಗೆ ಬಂದಿದ್ದಾರೆ ಎಂದರೆ

ಅವರಿಗೆ ನಮ್ಮ ಸಿಟ್ಟಿನ ಕುರಿತು ಬೆಲೆಯಿಲ್ಲ, ಭಯವಿಲ್ಲ ಎಂದರ್ಥ.

ನಾವು ವಿನಾಕಾರಣ ಸಿಟ್ಟಿಗೆ ಬರುತ್ತಿದ್ದೇವೆ ಎಂದರೆ, ಸಿಟ್ಟು ಮಾಡಿಕೊಳ್ಳಬಾರದವರ ಮೇಲೆ ಸಿಟ್ಟು ಮಾಡುತ್ತಿದ್ದೇವೆ ಎಂದರೆ, ಸಿಟ್ಟಿಗೆ ಬರಬಾರದ ಸ್ಥಳದಲ್ಲಿ ಸಿಟ್ಟಿಗೆ ಬರುತ್ತಿದ್ದೇವೆ ಎಂದರೆ, ನಮ್ಮ ದೊಡ್ಡಸ್ತಿಕೆಯನ್ನು ತೋರಿಸಲು ಸಿಟ್ಟಿಗೆ ಬರುತ್ತಿದ್ದೇವೆ ಎಂದರೆ, ನಮ್ಮಷ್ಟು ಮೂರ್ಖರು ಯಾರಿಲ್ಲ. ನಮ್ಮ ಸಿಟ್ಟಿಗೆ ಬೆಲೆ ಇರುವದಿಲ್ಲ.

ರಾಮಾಯಣದಲ್ಲಿ ಒಂದು ಮಾತಿದೆ. ವಾಲ್ಮೀಕಿ ನಾರದರನ್ನು ಕೇಳುತ್ತಾರೆ. ಯಾರು ಸಿಟ್ಟಿಗೆ ಬಂದರೆ ಹದಿನಾಲ್ಕು ಲೋಕದ ಅಧಿಪತಿಗಳು ನಡುಗುತ್ತಾರೆಯೋ ಅಂತಹ ಪುರುಷೋತ್ತಮನ ಬಗ್ಗೆ ಹೇಳಿ ಅಂತ. ರಾಮ ಸುಮ್ಮಸುಮ್ಮನೇ ಸಿಟ್ಟಿಗೆ ಬರುವದಿಲ್ಲ. ಬಂದಾಗ ಮಾತ್ರ ಅಕ್ಷರಶಃ ಹದಿನಾಲ್ಕು ಲೋಕ ನಡುಗುತ್ತದೆ.

ಹಾಗೆ, ನನ್ನ ಗಂಡ ಸುಮ್ಮಸುಮ್ಮನೇ ಸಿಟ್ಟಿಗೆ ಬರುವದಿಲ್ಲ, ಬಂದಿದ್ದಾರೆ ಎಂದರೆ ಏನೋ

ತಪ್ಪಾಗಿರಬೇಕು ಎಂದು ಹೆಂಡತಿ ಮಕ್ಕಳಿಗೆ ಅನಿಸಬೇಕು. ‘ಈವಯ್ಯಂದು ಇದ್ದದ್ದೆ, ಮಾತಾಡಬೇಡ ಸುಮ್ಮನಿರು’ ಅಂತ ಅವರ ಬಾಯಲ್ಲಿ ಮಾತು, ಮನಸ್ಸಿನಲ್ಲಿ ಆಲೋಚನೆ ಬಂತೆಂದರೆ ನಮ್ಮ ಸಿಟ್ಟಿಗೆ ಬೆಲೆ ಇಲ್ಲ ಎಂದರ್ಥ.

ಹಾಗೆಯೇ, ನನ್ನ ಹೆಂಡತಿ ಸಿಟ್ಟಿಗೆ ಬಂದಿದ್ದಾಳೆ ಎಂದರೆ ಅದಕ್ಕೆ ಬಲವಾದ ಕಾರಣವಿರಬೇಕು. ದೊಡ್ಡ ತಪ್ಪೊಂದು ನಡೆದಿರಬೇಕು ಅಂತ ಗಂಡನಿಗೆ ಅನಿಸಬೇಕು. ವಿನಾಕಾರಣ ಸಿಟ್ಟಿಗೆ ಬರುವವಳಲ್ಲ ಇವಳು ಅಂತ ಅವನಿಗೆ ತೀರ್ಮಾನವಾಗಿರಬೇಕು. ಆಗ ನಮ್ಮ ಸಿಟ್ಟಿಗೆ ಅವರು ಹೆದರುತ್ತಾರೆ, ನಮ್ಮ ಅಭಿಪ್ರಾಯವೇನು ಎಂದು ತಿಳಿಯಲು ಪ್ರಯತ್ನಿಸುತ್ತಾರೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಯಾವ ಕಾರಣಕ್ಕಾಗಿ ನಾವು ಸಿಟ್ಟಿಗೆ ಬಂದಿದ್ದೇವೆಯೋ ಆ ಕೆಲಸವನ್ನು ನಮ್ಮವರು ಶ್ರದ್ಧೆಯಿಂದ ಮಾಡುತ್ತಿದ್ದಾರೆ, ಮತ್ತು ಆ ತಪ್ಪು ಮರುಕಳಿಸದಂತೆ ಎಚ್ಚರ ವಹಿಸುತ್ತಿದ್ದಾರೆ ಎಂದರೆ ನಾವು ಮನೆಯ

ಪ್ರೀತಿಯ ಯಜಮಾನರು ಎಂದು ನಿಸ್ಸಂಶಯವಾಗಿ ಸಿದ್ಧ.

ಇಂತಹ ಸಿಟ್ಟನ್ನು ತರಿಸಿಕೊಳ್ಳಲೂ ಸಹ ಮನುಷ್ಯ ದೊಡ್ಡವನಾಗಿರಬೇಕಾಗುತ್ತದೆ.

ಇನ್ನು ಈ ಸಿಟ್ಟಿನಿಂದ ಮುಂದುವರೆಯುವ ಗಂಡಹೆಂಡಿರ ಜಗಳಗಳು.

ನೋಡಿ, ಜಗಳ ಎಂದರೆ ಘರ್ಷಣೆ. ಈ ಘರ್ಷಣೆಯಿಂದ ಒಂದು ಸದ್ಗುಣ ನಿಮ್ಮಿಬ್ಬರಲ್ಲೊಬ್ಬರಲ್ಲಿ ಮೂಡಿದರೆ ಆ ಜಗಳ ಯಶಸ್ವೀ ಜಗಳ. ಇದು ಇಬ್ಬರೂ ಒಳ್ಳೆಯವರಾಗಿದ್ದರೆ ಯಾವಾಗಲೂ ಯಶಸ್ವಿಯಾಗಿರುತ್ತದೆ.

ಆದರೆ, ಕೆಲವು ಬಾರಿ ನಮ್ಮ ಸಂಗಾತಿ ತನ್ನ ತಪ್ಪನ್ನು ಒಪ್ಪಿಕೊಳ್ಳಲು ತಯಾರಿರುವದಿಲ್ಲ. ಅವನಿಗೆ/ಳಿಗೆ ಆ ತಪ್ಪನ್ನು ಮಾಡದೇ ಇರಲು ಸಾಧ್ಯವಾಗುತ್ತಿಲ್ಲ. ಆಗ ಜಗಳದ ಮಾರ್ಗಕ್ಕಿಂತ ಸಾಮದ ಮಾರ್ಗ ತುಂಬ ಸಹಕಾರಿ. ನಾವು ಅವರನ್ನು ಬದಲಿಸಬೇಕು ಎಂದೇ ನಿಶ್ಚಯವಿದ್ದರೆ ಮೊದಲಿಗೆ

ನಮ್ಮ ಒಡಲಲ್ಲಿ ತುಂಬಿರುವ ಕಡಲಿನಂತಹ ಪ್ರೀತಿಯನ್ನು ಅವರಿಗೆ ತೋರಿಸಬೇಕು. ಪ್ರಾಮಾಣಿಕವಾಗಿ ಪ್ರೀತಿಸಬೇಕು, ಪ್ರಾಮಾಣಿಕವಾಗಿ ತೋರಿಸಬೇಕು. ಈ ಪ್ರಾಮಾಣಿಕತೆ ಎನ್ನುವದನ್ನು ಮಾತ್ರ ಯಾವ ಹಂತದಲ್ಲಿಯೂ ಬಿಡುವಂತಿಲ್ಲ. ಆ ಬಳಿಕ, ಅವರ ಆ ಕೆಟ್ಟ ಗುಣದ ಕುರಿತು ನಿಧಾನವಾಗಿ ಮಾತನಾಡಬೇಕು.

ಕೆಲವರಿಗೆ ಅಸಹ್ಯವಾಗಿ ನಗುವ ಚಟವಿರುತ್ತದೆ. ಕೆಲವರಿಗೆ ಅತಿರೇಕವಾಗಿ ಮಾತನಾಡುವ ಚಟವಿರುತ್ತದೆ. ಕೆಲವರಿಗೆ ಭಯಂಕರವಾದ ವರ್ತನೆಗಳು. ಕೆಲವರ ಚೇಷ್ಟೆಗಳನ್ನು ಸಹಿಸಲು ಸಾಧ್ಯವೇ ಇರುವದಿಲ್ಲ. ಇದನ್ನು ಅವರಿಗೆ ಪ್ರೀತಿಯಿಂದ ಮನವರಿಕೆ ಮಾಡಿಕೊಡಬೇಕು. ಈ ಕೆಟ್ಟದ್ದನ್ನು ನೀವು ಬಿಡಲೇಬೇಕು ಎಂದು ಆಗ್ರಹಿಸಬೇಕು. ಅದಕ್ಕಾಗಿ ಸಮಯ ನೀಡಬೇಕು. ಆ ವರ್ತನೆಗೆ ಕಾರಣವನ್ನು ಇಬ್ಬರೂ ಕೂಡಿ ಹುಡುಕಬೇಕು. ಹತ್ತು ಜನರ ಮಧ್ಯದಲ್ಲಿದ್ದಾಗ ಅವರು ಆ ತಪ್ಪು ಮಾಡುತ್ತಿದ್ದರೆ ಯಾರಿಗೂ ಗೊತ್ತಾಗದಂತೆ ಅವರಿಗೆ ಅದನ್ನು ತಿಳಿಸುವ ಜಾಣ್ಮೆ

ನಮಗಿರಬೇಕು. ಯಾವತ್ತಿಗೂ ಅವರನ್ನು ಮತ್ತೊಬ್ಬರ ಮುಂದೆ ಬೈಯಬಾರದು, ಆಡಿಕೊಳ್ಳಬಾರದು. ಆಗ ನಿಧಾನವಾಗಿ ಅವರಿಂದ ಆ ಕೆಟ್ಟ ಗುಣವನ್ನು ತೊಲಗಿಸಲು ಸಾಧ್ಯ.

ರಂಪಾಟದಿಂದ ಮನಸ್ಸು ಕಲುಷಿತಗೊಳ್ಳುತ್ತದೆ. ಅದು ಯಾವತ್ತೂ ಒಳ್ಳೆಯ ಅಸ್ತ್ರವಾಗಲು ಸಾಧ್ಯವಿಲ್ಲ. ಮೂರನೆಯವರ ಮುಂದಂತೂ ರಂಪಾಟ ಮಾಡುವದು ಪರಮಮೂರ್ಖತನ. **ನಮ್ಮವರನ್ನು ತಿದ್ದುವ ನೆಪದಲ್ಲಿ ಮತ್ತೊಬ್ಬರ ಮುಂದೆ ಅವರಿಗೆ ಅವಮಾನ ಮಾಡುವದು ಅಕ್ಷಮ್ಯ ಅಪರಾಧ.** ಜಗಳಕ್ಕೂ, ರಂಪಾಟಕ್ಕೂ ಇರುವ ವ್ಯತ್ಯಾಸವನ್ನು ನಾವು ಮನಗಾಣಬೇಕು. ಸಾಮದ ಮಾರ್ಗದಿಂದ ಸಂಗಾತಿಯನ್ನು ಗೆಲ್ಲುವ ಜಾಣ್ಮೆಯನ್ನು ತೋರಬೇಕು.

ದ್ರೌಪದಿಗೆ ಸಭೆಯಲ್ಲಿ ಕೌರವರು ಅವಮಾನ ಮಾಡುತ್ತಾರೆ. ಅವಳು ಅಲ್ಲಿಯೂ ಗಂಡಂದಿರನ್ನು ಅವಮಾನಿಸುವದಿಲ್ಲ. ಸತ್ಯಕ್ಕೆ ಕಟ್ಟುಬಿದ್ದ ಗಂಡಂದಿರು ಸುಮ್ಮನಿದ್ದಾರೆ ಎಂದು ತಿಳಿದು ಶ್ರೀಹರಿಗೆ ಮೊರೆ ಹೋಗಿ ತನ್ನನ್ನು ತಾನು

ಕಾಪಾಡಿಕೊಳ್ಳುತ್ತಾಳೆ. ವನವಾಸಕ್ಕೆ ಬಂದಾಗಲೂ ಅವಮಾನ ಮಾಡುವದಿಲ್ಲ. ಅವರ ಸಾಂಗತ್ಯ ಬಿಟ್ಟು ಹೋಗುವದಿಲ್ಲ. ಬದಲಾಗಿ ತನ್ನ ಗಂಡ ಧರ್ಮರಾಜನ ತಪ್ಪನ್ನು ಅವನಿಗೇ ಮನವರಿಕೆ ಮಾಡಿಕೊಡುತ್ತಾಳೆ. ಆದರೆ ತಿರಸ್ಕಾರವನ್ನು ಎಂದಿಗೂ ತಾಳುವದಿಲ್ಲ.

ದ್ರೌಪದಿಯಷ್ಟೇ ಅಲ್ಲ. ಧರ್ಮರಾಜ ಸಹಿತ ಅದ್ಭುತ ಪಾಠ ಕಲಿಸುತ್ತಾನೆ. ದ್ಯೂತದ ಪ್ರಸಂಗದ ನಂತರ ಇಡಿಯ ಜೀವನ — ಯುದ್ಧವಾದ ಬಳಿಕ ಸಹಿತ — ತಾನು ದೇಹತ್ಯಾಗ ಮಾಡುವವರೆಗೆ ತನ್ನ ತಪ್ಪಿಗೆ  ಪ್ರತಿಯಾಗಿ ಎಲ್ಲ ಸುಖಗಳನ್ನೂ ತ್ಯಾಗ ಮಾಡಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಾನೆ.

**ದ್ಯೂತದ ಪ್ರಸಂಗ ನಡೆದು ಹೋಗಿದೆ. ಅದನ್ನು ಮತ್ತೆಮತ್ತೆ ಕೆದಕಿ ದ್ರೌಪದಿ ಧರ್ಮರಾಜನನ್ನು ಕಾಡಿಸುವದಿಲ್ಲ. ನಡೆದು ಹೋಗಿದೆ, ದ್ರೌಪದಿಯೂ ಮರೆತಿದ್ದಾಳೆ ಅಂದುಕೊಂಡು ಅವಳ ಸದ್ಗುಣವನ್ನು ದುರುಪಯೋಗ ಪಡಿಸಿಕೊಂಡು ತನ್ನ ಎಂದಿನ ಜೀವನದಲ್ಲಿ ತೊಡಗಿಕೊಳ್ಳುವದಿಲ್ಲ.** ಹೀಗೆ ತಮ್ಮ ಸದ್ಗುಣಗಳಿಂದ ದ್ರೌಪದೀ ಧರ್ಮರಾಜ ಇಬ್ಬರೂ

ಬದುಕನ್ನು ಹಸನುಗೊಳಿಸುಕೊಳ್ಳುತ್ತಾರೆ. ನಮ್ಮ ಬದುಕಿಗೆ ಆದರ್ಶವಾಗುತ್ತಾರೆ.

ಪ್ರತಿಯೊಬ್ಬರ ಜೀವನದಲ್ಲಿ ಸಂಗಾತಿಯಿಂದ ಇಂಥದೊಂದು ತಪ್ಪು ಜರುಗೇ ಇರುತ್ತದೆ. ಆದರೆ, ನಾವು ಆ ತಪ್ಪನ್ನು ಅವರನ್ನು ಕಾಡಿಸುವ ಅಸ್ತ್ರವನ್ನಾಗಿ ಬಳಸುವದು ಬೇಡ. ಕ್ಷಮಿಸಿ ನಮ್ಮವರನ್ನಾಗಿ ಸ್ವೀಕರಿಸೋಣ, ದ್ರೌಪದಿಯಂತೆ.

ಅವರು ಕ್ಷಮಿಸಿದ್ದಾರೆ ಕ್ಷಮಿಸುತ್ತಾರೆ ಎಂದು ನಮ್ಮ ತಪ್ಪನ್ನು ಮರೆತು ಮೆರೆಯುವದೂ ಬೇಡ, ಮತ್ತೊಂದು ತಪ್ಪನ್ನು ಮಾಡಲು ಮುಂದಾಗುವದೂ ಬೇಡ. ತಪ್ಪು ತಪ್ಪೇ. ನನ್ನ ಸಂಗಾತಿ ಕ್ಷಮಿಸಿದರೆ ಅದು ಅವನ/ಳ ದೊಡ್ಡಗುಣ. ಆದರೆ, ಆ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಧರ್ಮರಾಜನಂತೆ.

ಹಾಗಾದಾಗ ನಮ್ಮ ಸಂಗಾತಿಗೆ ನಮ್ಮ ಮೇಲಣ ಪ್ರೀತಿ ಇಮ್ಮಡಿಯಾಗುತ್ತದೆ. ನಾವು ನಮ್ಮ ಮಕ್ಕಳಿಗೆ ಆದರ್ಶವಾಗುತ್ತೇವೆ.

## ನಮ್ಮ ಬದುಕು ನಮ್ಮದು. ಅದು ಹಾಳಾಗಲಿಕ್ಕೆ ಬೇರೆಯವರಲ್ಲ ಕಾರಣ. ನಮ್ಮ ದಡ್ಡತನಗಳು.

ಸಿಟ್ಟು ಒಂದು ಭಾವನೆ. ಯಾವುದೇ ಭಾವನೆಯನ್ನು ಯಾವಾಗ ಎಲ್ಲಿ ಯಾರೊಂದಿಗೆ ವ್ಯಕ್ತಪಡಿಸಬೇಕು ಎನ್ನುವ ಎಚ್ಚರ ನಮಗೆ ಬಂದರೆ ನಮ್ಮ ಜೀವನವನ್ನು ಯಾರೂ ಹಾಳುಗೆಡಹಲು ಸಾಧ್ಯವಿಲ್ಲ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491